# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರವರ ಕಛೇರಿ, ಕೆಂಪೇಗೌಡ ಪೌರ ಸಭಾಂಗಣ, ನರಸಿಂಹರಾಜ ಚೌಕ, ಬೆಂಗಳೂರು-560002.**

ದೂರವಾಣಿ:080-2297550/22221286, ಫ್ಯಾಕ್ಸ್: 080-22223194, ಇ-ಮೇಲ್:comm@bbmp.gov.in


ಸಂಖ್ಯೆ:ಕೌಕಾ/ಸಿಬ್ಬಂದಿ/ಪಿಆರ್/198/2019-20 ದಿನಾಂಕ:08-05-2019

## ಸುತ್ತೋಲೆ

ವಿಷಯ: ಕಡ್ಡಾಯವಾಗಿ ವಾರ್ಡ್ ಸಮಿತಿ ಸಭೆ ನಡೆಸುವ ಬಗ್ಗೆ

ಉಲ್ಲೇಖ: 1) ಕೌಕಾ/ವಾರ್ಡ್ ಸಮಿತಿ/ಪಿಆರ್/198/2018-19 ದಿನಾಂಕ:12/02/2019.

2) ಕೌಕಾ/ಸಿಬ್ಬಂದಿ/ಪಿಆರ್/03/2019-20 ದಿನಾಂಕ: 16-04-2019

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಕೌನ್ಸಿಲ್ ಕಾರ್ಯಾಲಯವು ಉಲ್ಲೇಖ (2)ರ ರೀತ್ಯಾ ಆಯುಕ್ತರ ಅನುಮೋದನೆ ಪಡೆದು ಏಪ್ರಿಲ್/ಮೇ ತಿಂಗಳ ವಾರ್ಡ್ ಸಮಿತಿ ಸಭೆ ನಡೆಸಲು ಯಾವುದೇ ಚುನಾವಣಾ ನೀತಿ ಸಂಹಿತೆ ಅಡ್ಡಿಯಾಗುವುದಿಲ್ಲವೆಂದು ಸಭೆ ನಡೆಸಲು ಅಧಿಕೃತ ಜ್ಞಾಪನಾ ಪತ್ರವನ್ನು ಹೊರಡಿಸಿದ್ದರೂ ಸಹ ಇದುವರೆಗೂ ವಾರ್ಡ್ ಸಮಿತಿ ಸಭೆಯನ್ನು ನಡೆಸದೇ ಇರುವುದರಿಂದ ಪಾಲಿಕೆಯ ಆಡಳಿತ ವಿಭಾಗಕ್ಕೆ ಕೋರಿಕೆಗಳು/ದೂರುಗಳು ಪದೇ ಪದೇ ಬರುತ್ತಿರುವುದರಿಂದ ಈ ಕೂಡಲೇ ವಾರ್ಡ್ ಸಮಿತಿ ಸಭೆಗಳನ್ನು ನಡೆಸಿ ಸಂಬಂಧಪಟ್ಟ ನಡವಳಿಗಳನ್ನು ವಿಡಿಯೋ ಚಿತ್ರೀಕರಣ ಮಾಡಿ ಪಾಲಿಕೆಯ ವೆಬ್‌ನಲ್ಲಿ 7 ದಿನಗಳ ಒಳಗಾಗಿ ಅಳವಡಿಸಲು ಸಂಬಂಧಪಟ್ಟ ವಾರ್ಡ್ ಸಮಿತಿ ಸಭೆಯ ಸದಸ್ಯ ಕಾರ್ಯದರ್ಶಿಗಳು ಕ್ರಮ ಕೈಗೊಂಡು, ಸದರಿ ನಡವಳಿ ಪ್ರತಿಯನ್ನು ಅಪರ ಆಯುಕ್ತರು ಆಡಳಿತ ರವರ ಮೂಲಕ ಕೌನ್ಸಿಲ್ ಕಾರ್ಯಾಲಯಕ್ಕೆ ಸಲ್ಲಿಸಲು ನಿರ್ದೇಶಿಸಿದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟ ಸದಸ್ಯ ಕಾರ್ಯದರ್ಶಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:</u>

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಮಾನ್ಯ ಅಪರ ಆಯುಕ್ತರು (ಆಡಳಿತ), ಬಿ.ಬಿ.ಎಂ.ಪಿ. ಬೆಂಗಳೂರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4. ಎಲ್ಲಾ ಪಕ್ಷದ ನಾಯಕರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ವಿಶೇಷ ಆಯುಕ್ತರು (ಯೋಜನೆ)/(ಆಸ್ತಿಗಳು)/(ಹಣಕಾಸು) ರವರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
6. ಪ್ರಧಾನ ಅಭಿಯಂತರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
7. ಜಂಟಿ ಆಯುಕ್ತರು (ಕಂದಾಯ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
8. ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು ಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.